6. ಅರ್ಜಿಗಳನ್ನೊಪ್ಪಿಸುವುದು:

1. ಶ್ರೀ ಯು.ಬಿ. ಬಣಕಾರ್ (ಸದಸ್ಯರು): ಹಾವೇರಿ ಜಿಲ್ಲೆ, ಹಿರೇಕೆರೂರು ತಾಲ್ಲೂಕು, ಚಿಕ್ಕೇರೂರು ಗ್ರಾಮದಲ್ಲಿರುವ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಅರ್ಜಿಯನ್ನು ಒಪ್ಪಿಸುವುದು.

ಅಧ್ಯಕ್ಷರು: ಶ್ರೀ ಯು.ಬಿ.ಬಣಕಾರ್

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು): ಮಾನ್ಯ ಅಧ್ಯಕ್ಷರೆ, ಹಾವೇರಿ ಜಿಲ್ಲೆ, ಹಿರೇಕೆರೂರು ತಾಲ್ಲೂಕು, ಚಿಕ್ಕೇರೂರು ಗ್ರಾಮದಲ್ಲಿರುವ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು: ಒಪ್ಪಿಸಲಾಯಿತು.

ಶ್ರೀ ನಾರಾಯಣಗೌಡ ಇಲ್ಲ,

2. ಬಿ.ಡಿ.ಎ. ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್‌ನವರು ನಿವೃತ್ತ ನೌಕರರಿಗೆ ನಿವೇಶನ ನೀಡದೆ ವಂಚಿಸಿರುವ ಬಗ್ಗೆ ಅರ್ಜಿಯನ್ನು ಒಪ್ಪಿಸುವುದು.

ಅಧ್ಯಕ್ಷರು (ಶ್ರೀ ನಾರಾಯಣಗೌಡ, ಮಾನ್ಯ ಸದಸ್ಯರ ಪರವಾಗಿ): ಬಿ.ಡಿ.ಎ. ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್‌ನವರು ನಿವೃತ್ತ ನೌಕರರಿಗೆ ನಿವೇಶನ ನೀಡದೆ ವಂಚಿಸಿರುವ ಬಗ್ಗೆ ಅರ್ಜಿಯನ್ನು ಒಪ್ಪಿಸಿದ್ದೇನೆ.

ಅರ್ಜಿಯನ್ನು ಒಪ್ಪಿಸಲಾಯಿತು.

ಈಗ ವಿತ್ತೀಯ ಕಾರ್ಯಕಲಾಪಗಳು, ನೋಡಿ ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡಿ. ಇರತಕ್ಕಂಥ ಸಮಯದಲ್ಲಿ 2–3

ಗಂಟೆಯಲ್ಲಿ ಎಷ್ಟು ಜನರಿಗೆ ಅವಕಾಶ ಆಗುತ್ತದೆ ನೋಡೋಣ, ಮಾತನಾಡಿ. ಲೋಕಾಯುಕ್ತ ವಿಧೇಯಕದ ಬಗ್ಗೆ introduction ಮತ್ತು ಚರ್ಚೆಯನ್ನು ಒಟ್ಟಿಗೆ ತೆಗೆದುಕೊಳ್ಳೋಣ ಎಂದು ಹೇಳಿದರು. ಮಧ್ಯಾಹ್ನ ಹೇಗೂ ಸದನ ಇದೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗು ಮುಜರಾಯಿ ಸಚಿವರು): ಒಂದು ವಿಧೇಯಕ withdraw ಮಾಡುವುದಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈಗ ಎಲ್ಲಾ ಚರ್ಚೆಯಾಯಿತು, ನೀವು ತಡವಾಗಿ ಬಂದಿದ್ದೀರಿ, ಮಧ್ಯಾಹ್ನದ ಮೇಲೆ ಮಾಡಬಹುದು ಎಂದು ಹೇಳಿದ್ದಾರೆ. ಮಧ್ಯಾಹ್ನದ ಮೇಲೆ ಅದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು: ಈಗಾಗಲೇ ವಿಧೇಯಕ Withdraw ಆಗಿದೆ.

ಶ್ರೀ ಟಿ.ಬಿ. ಜಯಚಂದ್ರ: Introduction ಮಾಡಿದರೆ ..ನಿಮಗೆ copies ಸಿಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕಾಪಿ ಬಂದಿದೆ.

ಶ್ರೀ ಜಗದೀಶ್ ಶೆಟ್ಟರ್: ಮಧ್ಯಾಹ್ನ ತೆಗೆದುಕೊಳ್ಳುವುದಾಗಿ ಹೇಳಿ ಈಗಾಗಲೇ ruling ಕೊಟ್ಟಿದ್ದಾರೆ. ಈಗ ಬೇಡಿಕೆಯ ಮೇಲೆ ಚರ್ಚೆ ಮಾಡುತ್ತಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಒಟ್ಟಿಗೆ ತೆಗೆದುಕೊಳ್ಳಿ.

ಅಧ್ಯಕ್ಷರು: Ok.